ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಒದಗಿಸಲಾಗಿದೆ. 289 ವಾಹನಗಳು.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಭದ್ರಾ ಅಣೆಕಟ್ಟು ವ್ಯಾಪ್ತಿಯಲ್ಲಿ ಕಾಮಗಾರಿಗಳ ಕಂಟ್ರಾಕ್ಟರ್‌ಗಳಿಗೆ ನೀಡಬೇಕಾದ ಬಿಲ್ಲುಗಳ ಮೊತ್ತ

3241 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರ ಮತ್ತು ಭದ್ರ ಕಾಡ ವ್ಯಾಪ್ತಿಗೆ ಬರುವ ಅಚ್ಚುಕಟ್ಟು ಪ್ರದೇಶ ಇಂಜಿನಿಯರ್ ಇಲಾಖೆಯಲ್ಲಿ ಕಂಟ್ರಾಕ್ಟರಿಗೆ ಕೊಡುವ ಬಿಲ್ಲು ಸೆಪ್ಟೆಂಬರ್ 2000ದ ವರೆಗೆ ಎಷ್ಟು ಕೋಟಿ ಇರುತ್ತದೆ?

ಆ) ಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಇರುವ ರಸ್ತೆಗಳ ರಿಪೇರಿ ಮತ್ತು ಚಾನಲ್ ಮತ್ತು ಕಲ್ಲು ವರಟುಗಳ ರಿಪೇರಿಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಭದ್ರ ಕಾಡಕ್ಕೆ ಹೊಸರಸ್ತೆ ಮತ್ತು ಚೂಡು ಚಾನಲ್ ಮತ್ತು ಕಲ್ಲು ವರಟುಗಳನ್ನು ಮಾಡಲು ಹಣವನ್ನು ನೀಡಲಾಗಿದೆಯೇ? ಹಾಗಿದ್ದಲ್ಲಿ ಇದುವರೆವಿಗೂ ಕೆಲಸಗಳನ್ನು ಕೈಗೊಳ್ಳದೆ ಇರುವುದಕ್ಕೆ ಕಾರಣವೇನು?

ಶ್ರೀ ಎಚ್.ಕೆ. ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಭದ್ರಾ ಕಾಡಾ ವ್ಯಾಪ್ತಿಗೆ ಬರುವ ಅಚ್ಚುಕಟ್ಟು ಪ್ರದೇಶದಲ್ಲಿ ಸೆಪ್ಟೆಂಬರ್ - 2000 ಅಂತ್ಯಕ್ಕೆ ಗುತ್ತಿಗೆದಾರರಿಗೆ ಕೊಡಬೇಕಾದ ಬಿಲ್ಲುಗಳ ಮೊತ್ತ ಒಟ್ಟು ರೂ. 146.53 ಲಕ್ಷ ಇರುತ್ತದೆ.

ಆ) 2000-01ನೇ ಸಾಲಿಗೆ ಲೆಕ್ಕ ಶೀರ್ಷಿಕೆ 3054 ಯೋಜನೇತರ ಅಡಿಯಲ್ಲಿ ಆಯಕಟ್ಟು ರಸ್ತೆಗಳ ನಿರ್ವಹಣೆಗಾಗಿ ರೂ. 300.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಇ) ಈ ಸಾಲಿನಲ್ಲಿ ಹೊಸ ರಸ್ತೆಗಳ ಸಲುವಾಗಿ ಯಾವುದೇ ಹಣ ನಿಗದಿಪಡಿಸದೇ ಇರುವುದರಿಂದ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಭದ್ರಾ ವ್ಯಾಪ್ತಿಗೆ ಬರುವ ಗೊಂದಿನಾಲೆ ರಿಪೇರಿ

3242 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ವ್ಯಾಪ್ತಿಗೆ ಬರುವ ಗೊಂದಿ ನಾಲೆಯ ಹೂಳನ್ನು 1999-2000ನೇ ಸಾಲಿನಲ್ಲಿ ತೆಗೆಯಲಾಗಿದೆಯೇ?

ಅ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ನಾಲೆಯ ರಿಪೇರಿಯನ್ನು 1999-2000ನೇ ಸಾಲಿನಲ್ಲಿ ಮಾಡಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಇಲ್ಲ.

ಆ) 1999-2000ನೇ ಸಾಲಿನಲ್ಲಿ ಹೂಳು ತೆಗೆಯುವ ಕಾಮಗಾರಿಯನ್ನು ಲೆಕ್ಕ ಶೀರ್ಷಿಕೆ 2701 ಗೊಂದಿ (ನಿರ್ವಹಣೆ) ಅಡಿಯಲ್ಲಿ ಕೈಗೊಳ್ಳಬೇಕಾಗಿದ್ದು, ರೂ. 7 ಲಕ್ಷಗಳು ಅನುದಾನ ಬಿಡುಗಡೆಯಾಗಿರುತ್ತದೆ. ದಿ. 31.3.99ರ ಅಂತ್ಯಕ್ಕೆ ಸದರಿ ಲೆಕ್ಕ ಶೀರ್ಷಿಕೆಯಲ್ಲಿ ರೂ. 7.63 ಲಕ್ಷಗಳಷ್ಟು ಬಿಲ್ಲುಗಳು ಪಾವತಿಯಾಗಬೇಕಾಗಿರುತ್ತದೆ. ಈ ಕಾರಣದಿಂದ ಬಿಡುಗಡೆಯಾದ ಅನುದಾನಕ್ಕಿಂತ ಬಾಕಿ ಬಿಲ್ಲುಗಳ ಮೊತ್ತ ಹೆಚ್ಚಾಗಿರುವುದರಿಂದ, ಹೂಳು ತೆಗೆಯುವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

ಇ) 1999-2000ನೇ ಸಾಲಿನಲ್ಲಿ ನೀರು ಸಮರ್ಪಕ ನಿರ್ವಹಣೆ ಕುರಿತಂತೆ ಅಗತ್ಯ ಕಾಮಗಾರಿಗಳನ್ನು ರೂ. 29.59 ಲಕ್ಷಗಳಿಗೆ ಕೈಗೊಳ್ಳಲಾಗಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸವದತ್ತಿ ತಾಲ್ಲೂಕಿನ ಮುರುಗೋಡ ಗ್ರಾಮದ 33 ಕೆ.ವಿ. ಸ್ಟೇಷನ್ ಕೆಲಸ ಪ್ರಾರಂಭ

3243 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್ ಕೆಲಸ ತೆಗೆದುಕೊಳ್ಳಲು ಎಂದು ಮಂಜೂರಾತಿ ನೀಡಲಾಗಿದೆ ಮತ್ತು ಎಷ್ಟು ಮೊತ್ತಕ್ಕೆ ಮಂಜೂರಾತಿ ನೀಡಲಾಗಿದೆ?

ಆ) ಈ ಕೆಲಸಕ್ಕೆ ಈಗಾಗಲೇ ಜಮೀನು ವಶಪಡಿಸಿಕೊಳ್ಳಲಾಗಿದೆ ಎಂಬ ಸಂಗತಿ ನಿಜವೆ?

ಇ) ಸರ್ಕಾರ ಈ ಕೆಲಸಕ್ಕೆ ಮಂಜೂರಾತಿಯನ್ನು ನೀಡಿದ್ದರೂ ಹಾಗೂ ಜಮೀನು ವಶಪಡಿಸಿಕೊಳ್ಳಲಾಗಿದ್ದರೂ ಸಹ ಈ ಕೆಲಸ ಪ್ರಾರಂಭವಾಗದೇ ಇರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ ಈ ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್